

# ಪ್ರಸಿದ್ಧರ ಕಥೆಗಳು

ಟೈಗರ್ ವರದಾಚಾರ್ಯರನ್ನು ಸ್ನೇಹಿತರೊಬ್ಬರು ಭೇಟಿ ಆದರು.
'ಹೇಗಿದ್ದೀರಿ ಟೈಗರ್?' ಪ್ರಶ್ನಿಸಿದರು.
'ಟೈಗರ್ರೇ, ನಾನೆಂತ ಟೈಗರ್? ದಿ ರಿಯಲ್ ಟೈಗರ್ ಈಸ್ ಅಟ್ ಹೋಮ್!

★★★

ಎಂ.ಡಿ. ರಾಮನಾಥನ್‌ರವರು ಸ್ನೇಹಿತರ ಮನೆಗೆ ಭೇಟಿ ಇತ್ತರು. ಒಳಗಿಂದ ಕಾಫಿ ಬಂತು.
'ಹೇಗಿದೆ ನನ್ನ ಶ್ರೀಮತಿ ಮಾಡಿದ ಕಾಫಿ?' ಕೇಳಿದರು ಸ್ನೇಹಿತರು.
'ದಿ ಓನ್ಲಿ ಕ್ವಾಲಿಫಿಕೇಷನ್ ಆಫ್ ದಿ ಕಾಫಿ ಈಸ್ ಇಟ್ಸ್ ಟೇಂಪರೇಚರ್!' ಅಂದು ಉತ್ತರಿಸಿದರು.

ಒಮ್ಮೆ ಎಂ.ಡಿ. ರಾಮನಾಥನ್‌ರವರು ಸ್ನೇಹಿತರ ಮನೆಯಲ್ಲಿ ಉಳಿಯಬೇಕಾದ ಸಂದರ್ಭ ಬಂತು. ಸ್ನೇಹಿತರು ಮಾತನಾಡುತ್ತಾ 'ತಮ್ಮ ವಯಸ್ಸು ಎಷ್ಟು ಅಂತ ಕೇಳಬಹುದೆ?' ಎಂದಾಗ 'ನನಗೂ ವಯಸ್ಸು 'ಷಣ್ಮುಗಪ್ರಿಯ' ಆಯ್ತು' ಎಂದು ಉತ್ತರಿಸಿದರು. ಸ್ನೇಹಿತರಿಗೆ ಅರ್ಥವಾಗಲಿಲ್ಲ. 'ಕೊಂಚ ಬಿಡಿಸಿ ಹೇಳಿ' ಅಂದರು. ಷಣ್ಮುಗಪ್ರಿಯ ರಾಗ 56ನೇ ಮೇಳ ಕರ್ತ ರಾಗ; ಅಂದರೆ ನನಗೆ 56 ವರುಷ ತಿಳಿಯಿತೆ? ಹಾಸ್ಯ ಮಾಡಿದರು.

★★★

ಅದೇ ರಾಮನಾಥನ್‌ರವರು ಆ ಸ್ನೇಹಿತರ ಮನೆಯಲ್ಲಿ ಉಳಿದಿದ್ದಾಗ ಬೆಳಿಗ್ಗೆ (ಸ್ನಾನ ಮಾಡಲು) ಸಣ್ಣ ಟವಲ್ ಕೊಳ್ಳಲು ಸ್ನೇಹಿತರ ಜೊತೆ ಅಂಗಡಿಗೆ ಹೊರಟರು. 'ಬಜಟ್ ಎಷ್ಟರಲ್ಲಿರಬೇಕು ಎಂದು ಕೇಳಬಹುದೆ?' ಎಂದಾಗ 'ಮಾಯಾ ಮಾಳವ ಗೌಳ' ಅಷ್ಟೆ ಅಂದರು. ಅರ್ಥವಾಗದ ಸ್ನೇಹಿತರು ಮುಖ ನೋಡುತ್ತಾ ನಿಂತಾಗ 'ನೋಡಿ, ಈ ರಾಗ 15ನೇ ಮೇಳ ಕರ್ತ ರಾಗ; ಈಗ ಅರ್ಥವಾಯಿತೆ? ನನ್ನ ಬಜಟ್ 15 ರೂಪಾಯಿಗಳು ಅಷ್ಟೆ!'



★★★

ಪ್ರಸಿದ್ಧ ಸಂಗೀತಜ್ಞರೊಬ್ಬರು ಸ್ನೇಹಿತರ ಮನೆಗೆ ಹೋದಾಗ ಕುಡಿಯಲು ಕಾಫಿ ಬಂತು.
ಕಾಫಿಯಂತೂ ವಿಪರೀತ ಬಿಸಿಯಾಗಿದ್ದು ಕೈಯಲ್ಲಿ ಲೋಟ ಹಿಡಿಯದಾದರು.
ಮೂಲೆಯಲ್ಲಿ ಹುಡುಗನೊಬ್ಬ ಪಾಠ ಓದುತ್ತಾ ಕುಳಿತಿದ್ದ.
ಅವನನ್ನು 'ಮಗೂ, ಬಾ ಇಲ್ಲಿ. ಈ ಕಾಫಿ ಲೋಟ ತೆಗೆದುಕೊಂಡು ಕೊಂಚ 'ಆರೋಹಣ– ಅವರೋಹಣ' ಮಾಡಿಕೊಡು ಎಂದರು.
ಹುಡುಗ ತಬ್ಬಿಬ್ಬು! (ಕಾಫಿಯನ್ನು ಆರಿಸಿಕೊಡಲಿ ಎಂಬ ಸಂದೇಶ)

ಸಂಗ್ರಹ: **ಎ.ಕೆ. ಪಟ್ಟಾಭಿ**

